**ಅ.ದಾ. ಸಂಖ್ಯೆ: 34/2022**
**ಪಿ.ಡಬ್ಲೂ -02**

ದಿನಾಂಕಃ 21-07-**2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು :-** ಪ್ರ**ತಿವಾದಿಗಳ** ಪರ ಶ್ರೀ. **ಜಿವಿ.** ವಕೀಲರಿಂದ :-

ಏನು ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಡಿಗ್ರಿ ಎಂದು ನುಡಿಯುತ್ತಾರೆ. ಏನು ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಕೋ ಆಪರೇಟಿವ್ ಸೊಸೈಟಿಯಲ್ಲಿ ಸಿಇಒ ಎಂದು ಕೆಲಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಹೇಳಲು ನಿಮ್ಮನ್ನು ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿ ವಾದಿ ಎಂದು ನುಡಿಯುತ್ತಾರೆ. ವಾದಿಯು ನಿಮಗೆ ಮೊದಲಿನಿಂದಲೂ ಪರಿಚಯ ಎಂದರೆ ಸಾಕ್ಷಿ ಹೌದು ನಮ್ಮ ಊರಿನವರು ಎಂದು ನುಡಿಯುತ್ತಾರೆ. ಇತ್ತೀಚಿನ ದಿನಗಳಲ್ಲಿ ದಾವಾಸ್ವತ್ತನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

ಕ್ರಯಪತ್ರ ಆಗುವ ಮೊದಲಿನಿಂದಲೂ ಹಾಗೂ ಕ್ರಯಪತ್ರ ಆದ ನಂತರವೂ ದಾವಾಸ್ವತ್ತು ಹೇಗೆ ಇದೆಯೋ ಹಾಗೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾಸ್ವತ್ತುಗಳಲ್ಲಿ ವಾದಿಯೇ ಪೆನ್ಸಿಂಗ್ ಮತ್ತು ಹೋಗಿರುವ ಮಾವಿನ ಗಿಡಗಳನ್ನು ನೆಡುವುದನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರತಿವಾದಿಯೆ ದಾವಾಸ್ವತ್ತಿನಲ್ಲಿ ಸ್ವಾಧೀನ ಇರುವುದರಿಂದ ವಾದಿಯು ದಾವಾಸ್ವತ್ತನ್ನು ಅಭಿವೃದ್ಧಿ ಪಡಿಸಲು ಆಗಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಪ್ರತಿವಾದಿಯು ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿಯು ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿಯು ಬೆಂಗಳೂರಿನಲ್ಲೂ ಮತ್ತು ಊರಿನಲ್ಲೂ ವಾಸ ಇದ್ದಾರೆ ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು ಖರೀದಿ ಮಾಡುವಂತೆ ವಾದಿಗೆ ನೀವೆ ಹೇಳಿರುತ್ತೀರಿ ಎಂದರೆ ಸಾಕ್ಷಿ ಹೌದು ಕಾರಣ ನನಗೆ ದಾವಾಸ್ವತ್ತನ್ನು ಖರೀದಿ ಮಾಡಲು ಆಫರ್ ಬಂದಾಗ ನಾನು ವಾದಿಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ವತ್ತನ್ನು ನೀವೆ ವ್ಯಾಪಾರ ಮಾಡಿಸಿ ವಾದಿಗೆ ಖರೀದಿ ಮಾಡಿಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ

ಎಂದು ನುಡಿಯುತ್ತಾರೆ. ದಾವಾಸ್ವತ್ತಿಗೆ ಸಂಬಂಧಪಟ್ಟಂತಹ ದಾಖಲೆಗಳನ್ನು ನೀವು ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ರಕ್ಷಿತ ರವರ ವಂಶವೃಕ್ಷವನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಂಶವೃಕ್ಷದಲ್ಲಿ ಪ್ರತಿವಾದಿ , ಅವರ ತಾಯಿ ಮತ್ತು ತಂಗಿಯವರ ಹೆಸರು ನಮೂದು ಇತ್ತ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-2ರ ದಾನಪತ್ರವನ್ನು ತೋರಿಸಲಾಗಿ ಸದರಿ ದಾನಪತ್ರದಲ್ಲಿ ಮುನಿರಾಜು ರವರ ಸ್ವಯಾರ್ಜಿತ ಸ್ವತ್ತು ಎಂದು ಬರೆದಿರುತ್ತದೆಯೆ ಎಂದರೆ ಸಾಕ್ಷಿ ಸ್ವಯಾರ್ಜಿತ ಎಂದು ಬರೆದಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಸ್ವತ್ತು ಮುನಿರಾಜುರವರ ಒಟ್ಟು ಕುಟುಂಬದ ಆಸ್ತಿಯಿಂದ ಖರೀದಿ ಮಾಡಿರುವ ಸ್ವತ್ತಾದ್ದರಿಂದ ಸದರಿ ದಾನಪತ್ರದಲ್ಲಿ ಮುನಿರಾಜುರವರ ಸ್ವಯಾರ್ಜಿತ ಸ್ವತ್ತು ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಮಗೆ ಕ್ರಯಕ್ಕೆ ಆಫರ್ ಬಂದ ದಿನದಂದು 4 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಬೆಂಗಳೂರಿನಲ್ಲಿ ಸದರಿ ರಕ್ಷಿತಾ ರವರ ವಿರುದ್ದ ಅಸಲು ದಾವೆ ನಂ .1531/2021 ದಾವೆ ಬಾಕಿ ಇದ್ದ ಬಗ್ಗೆ ಗೊತ್ತಿತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ರಕ್ಷಿತ ರವರು ವಾದಿಗೆ ಕ್ರಯಪತ್ರ ಮಾಡಿಕೊಟ್ಟ ದಿನಾಂಕ ನೆನಪು ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯವರ ಹೆಸರಿಗೆ ದಿನಾಂಕ 19.11.2021 ರಂದು ಕ್ರಯಪತ್ರ ಆಗಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 19.11.2021 ರಂದು ದಾವಾಸ್ವತ್ತನ್ನು ಮಾರಾಟ ಮಾಡಬಾರದು ಎಂದು ಸದರಿ ರಕ್ಷಿತ ರವರ ವಿರುದ್ದ 4 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಬೆಂಗಳೂರಿನಲ್ಲಿತಡೆಯಾಜ್ಞೆ ಆದೇಶ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ನಿಮಗೆ ಮುಖಪರಿಚಯ ಇದೆಯೆ ಎಂದರೆ ಸಾಕ್ಷಿ ನಾನು ವಾದಿಗೆ ಜಮೀನು ಕೊಡಿಸಿದಾಗ ಸದರಿಯವರು ಬಂದು ಜಮೀನನ್ನು ಕ್ರಯಕ್ಕೆ ಕೊಡಿಸುತ್ತೀಯಾ ಎಂದು

ಬೆದರಿಕೆ ಹಾಕಿದ್ದರು ಆ ಸಂಬಂಧ ಮಾಗಡಿ ಪೋಲಿಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ದೂರನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ದಿನಾಂಕ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಂಬಂಧ ಎಫ್ ಐ ಆರ್ ದಾಖಲಾಗಿರುತ್ತದೆಯಾ ಅಥವಾ ನಿಮ್ಮ ಮತ್ತು ಪ್ರತಿವಾದಿದಗಳ ಹೇಳಿಕೆ ಪಡೆದಿರುತ್ತಾರಾ ಎಂದರೆ ಸಾಕ್ಷಿ ಎಪ್ಐ ಆರ್ ಆಗಿರುವುದಿಲ್ಲ ಆದರೆ ಪ್ರತಿವಾದಿಗಳಿಗೆ ಕರೆಸಿ ಸಿವಿಲ್ ದಾವೆ ಯನ್ನು ನೋಡಿಕೊಳ್ಳಲು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಡಿ2 ಅನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ಇರುವವರು 1 ನೇ ಪ್ರತಿವಾದಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಿಡಿ-3 ರಲ್ಲಿ ಇರುವ ಶೆಡ್ ದಾವಾಸ್ವತ್ತಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಡಿ-8 ಅನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ಶೆಡ್ ಮತ್ತು 1 ನೇ ಪ್ರತಿವಾದಿ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಡಿ-10 ಅನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ 1 ನೇ ಪ್ರತಿವಾದಿ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಡಿ-11 ರಲ್ಲಿ 1 ನೇ ಪ್ರತಿವಾದಿಯು ಮಾವಿನ ಮರಗಳಿಗೆ ಔಷಧಿ ಸಿಂಡಿಪಸುತ್ತಿದ್ದಾರೆ ಎಂದರೆ ಸಾಕ್ಷಿ ನಾನು ನೋಡುತ್ತಿರುವ ಪೋಟೊ ಪ್ರಕಾರ 1 ನೇ ಪ್ರತಿವಾದಿಯು ಔಷಧಿ ಸಿಂಪಡಿಸುತ್ತಿರುವುದು ನಿಜ ಎಂದು ನುಡಿಯುತ್ತಾರೆ. ಅದೇ ರೀತಿ ಈಗ ಸಾಕ್ಷಿಗೆ ನಿಡಿ-7 ಮತ್ತು 8 ಅನ್ನು ತೋರಿಸಲಾಗಿ 1ನೇ ಪ್ರತಿವಾದಿಯು ಟ್ರಾಕ್ಟರ್ ನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಪೋಟೋ ಪ್ರಕಾರ ನಿಜ ಇರುತ್ತದೆ ಎಂದು ನುಡಿಯುತ್ತಾರೆ. ಮುನಿರಾಜುರವರು 2010 ರಲ್ಲಿ ದಾವಾಸ್ವತ್ತನ್ನು ಕ್ರಯಕ್ಕೆ ಪಡೆದಾಗಿನಿಂದ 1 ನೇ ಪ್ರತಿವಾದಿಯೇ ಮಾವಿನ ಕಾಯಿಗಳನ್ನು ಕೀಳಿಸುತ್ತಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿತಿಯುತ್ತಾರೆ. 1 ನೇ ಪ್ರತಿವಾದಿಗೆ ಮೋಸ ಮಾಡಬೇಕು ಎಂದು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ . ವಾದಿಯವರ ಹೆಸರಿಗೆ ಇದುವರೆಗೂ ಖಾತಾ ಆಗಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ತಕರಾರು ಇರುವ ದಾವಾಸ್ವತ್ತನ್ನು ಕೊಡಿಸಿರುವುದರಿಂದ ವಾದಿಯು ನಿಮಗೆ ಸಾಕ್ಷಿ ಹೇಳಲು ಕರೆದಿದ್ದರಿಂದ ಬಂದು ಸಾಕ್ಷಿ ಹೇಳುತ್ತಿದ್ದೀರಿಎಂದರೆ ಸಾಕ್ಷಿ ಇಲ್ಲ ಎಂದು ನುಡಿಯತ್ತಾರೆ.

ವಾದಿಯ ಹೆಸರಿಗೆ ಕ್ರಯಪತ್ರ ಆದಾಗಿದಿನಿಂದ 1 ನೇ ಪ್ರತಿವಾದಿಯೇ ದಾವಾಸ್ವತ್ತಿನಲ್ಲಿ ಸ್ವಾ ಧೀನ ಇದ್ದು ನೀವು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.